ನಿ=59 ರಂದ ನಿ=330 (6)

# ಕರ್ನಾಟಕ ವಿಧಾನ ಪರಿಷತ್ತು

(6)

**ವಿಧಾನ ಪರಿಷತ್ತಿನ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ಟಿ, ನಾರಾಯಣ ಸ್ವಾಮಿ, ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರಾದ ಶ್ರೀ ಎನ್.ರವಿಕುಮಾರ್ ಮತ್ತು ಮಾನ್ಯ ಶಾಸಕರುಗಳಾದ ಶ್ರೀ ಶಶಿಲ್ ಜಿ.ನಮೋಶಿ, ಡಾ: ತಳವಾರ್ ಸಾಬಣ್ಣ, ಶ್ರೀ ವೈ.ಎಂ.ಸತೀಶ್, ಶ್ರೀಮತಿ ಹೇಮಲತಾ ನಾಯಕ್ ಹಾಗೂ ಇತರರು ಕರ್ನಾಟಕ ವಿಧಾನ ಪರಿಷತ್ತಿನ ನಡವಳಿಕೆಯ ನಿಯಮಗಳ 330ರ ನಿಯಮದ ಪ್ರಕಾರ ನೀಡಿರುವ ಸೂಚನೆಗೆ ಉತ್ತರ:**

## ವಿಷಯ:

ಕಲುಬುರಗಿ ಜಿಲ್ಲೆಯಲ್ಲಿ 2024-25ನೇ ಸಾಲಿನಲ್ಲಿ ಮುಂಗಾರು ಮತ್ತು ಹಿಂಗಾರು ಬೆಳೆಗಳು ಅತಿವೃಷ್ಠಿ/ಅನಾವೃಷ್ಠಿ ಮತ್ತು ನೇಟೆ ರೋಗದಿಂದ ತೊಗರಿ ಸಂಪೂರ್ಣ ಹಾಳಾಗಿದ್ದು, ರೈತರು ಸಂಕಷ್ಟದಲ್ಲಿದ್ದು, 19,565 ಹೆಕ್ಟರ್ ಅತಿವೃಷ್ಠಿ ಕಳಪೆ ಬೀಜಗಳು ಪೂರೈಕೆಯಿಂದ ಮತ್ತು ಹಿಂಗಾರು ತೇವಾಂಶ ಕೊರತೆ, ನೆಟೆ ರೋಗದಿಂದ ತೊಗರಿ ಬೆಳೆಯು 1,82,963 ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ನಾಶವಾಗಿ, ರೈತರು ಕಂಗಾಲಾಗಿರುತ್ತಾರೆ. ಇದರ ಮಧ್ಯ ತೊಗರಿ ಬೆಳೆಗೆ ನಿಗಧಿತ ಬೆಂಬಲ ಇಲ್ಲದ ಕಾರಣ, ರೈತರುಗಳಿಗೆ ಜೀವನ ನಡೆಸುವುದೇ ಕಷ್ಟಸಾಧ್ಯವಾಗಿದೆ. ಒಂದು ಕಡೆ ಬೆಳೆ ನಾಶ, ಇನ್ನೊಂದು ಕಡೆ ನಿಗಧಿತ ಬೆಂಬಲ ಬೆಲೆಯ ಕೊರತೆಯಿಂದಾಗಿ ರೈತರ ಪರಿಸ್ಥಿತಿ ಹೇಳತೀರದಾಗಿದೆ. ಕಳೆದ ವರ್ಷಕ್ಕಿಂತ ಈ ವರ್ಷ ತೊಗರಿ ಬೆಳೆಯ ಬೆಲೆಯು ಕಡಿಮೆಗೊಂಡಿದ್ದು, ರೈತರ ಬುದಕು ದುಸ್ಥಿರವಾಗಿದೆ. ಈ ಕುರಿತು ಸರ್ಕಾರದ ಹಲವಾರು ಮಂತ್ರಿಗಳು ಮತ್ತು ಮುಖ್ಯಮಂತ್ರಿಗಳು ಪರಿಹಾರ ನೀಡುವುದಾಗಿ ಆಶ್ವಾಸನೆ ನೀಡಿದ್ದು, ಇಲ್ಲಿಯವರೆಗೆ ಯಾವುದೇ ಪರಿಹಾರವನ್ನು ಒದಗಿಸುವ ನಿಟ್ಟಿನಲ್ಲಿ ಕ್ರಮ ಕೈಗೊಂಡಿಲ್ಲ. ಆದ್ದರಿಂದ ಕಲಬುರಗಿ ಜಿಲ್ಲೆ ಮಾತ್ರವಲ್ಲದೇ, ಇತರೆ ಜಿಲ್ಲೆಗಳಾದ ಯಾದಗಿರಿ, ರಾಯಚೂರು, ಬಾಗಲಕೋಟೆ, ವಿಜಯಪುರ, ಬೆಳಗಾವಿ ಭಾಗದ ರೈತರ ಹಿತದೃಷ್ಠಿಯಿಂದ ಸದರಿ ರೈತರುಗಳಿಗೆ ಕೂಡಲೇ ಪರಿಹಾರ ಒದಗಿಸುವ ಕುರಿತು.

I

## ಉತ್ತರ:

2024ರ ಮುಂಗಾರು ಹಂಗಾಮಿನಲ್ಲಿ ಕಲಬುರಗಿ, ವಿಜಯಪುರ, ಬೆಳಗಾವಿ, ಬೀದರ್ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ತೊಗರಿ ಬೆಳೆಗೆ ಸಂಬಂಧಿಸಿದಂತೆ ವಿವರಗಳನ್ನು ಈ ಕೆಳಕಂಡಂತೆ ಸಲ್ಲಿಸಿದೆ.

**ಕಲಬುರಗಿ ಜಿಲ್ಲೆ:**

ಮುಂಗಾರು ಹಂಗಾಮಿನಲ್ಲಿ ತೊಗರಿ ಬೆಳೆಯು ಮುಖ್ಯ ಬೆಳೆಯಾಗಿದ್ದು, ಜಿಲ್ಲೆಯಲ್ಲಿ ಇಲ್ಲಿಯವರೆಗೆ ಬೆಳೆ ಸಮೀಕ್ಷೆ ಪ್ರಕಾರ ಅಂದಾಜು 6.27 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಗೊಂಡಿರುತ್ತದೆ. ಕಲಬುರಗಿ ಜಿಲ್ಲೆಯಲ್ಲಿ ಸಾಮಾನ್ಯವಾಗಿ 2024ರ ನವೆಂಬರ್ ತಿಂಗಳಿನಲ್ಲಿ ವಾಡಿಕೆಯಂತೆ 19.2 ಮಿ. ಮೀ ಮಳೆಯಾಗಬೇಕಿದ್ದು, ವಾಸ್ತವವಾಗಿ 5.6 ಮಿ.ಮೀ ಮಳೆಯಾಗಿದ್ದು, ವಾಡಿಕೆಗಿಂತ ಶೇ.71 ರಷ್ಟು ಮಳೆ ಕೊರತೆಯಾಗಿರುತ್ತದೆ.

ಈ ಕಾರಣದಿಂದ, ಕಡಿಮೆ ಆಳ ಮತ್ತು ಮಧ್ಯಮ ಆಳದ ಭೂಮಿಯಲ್ಲಿ ತೇವಾಂಶ ಕೊರತೆಯಿಂದ, ತೊಗರಿ ಬೆಳೆ ಒಣಗುತ್ತಿರುವುದು ಕಂಡುಬಂದ ಹಿನ್ನಲೆಯಲ್ಲಿ, ಇಲಾಖೆಯ ಕೋರಿಕೆಯಂತೆ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು ವಿಜ್ಞಾನಿಗಳ ತಂಡ ಕ್ಷೇತ್ರ ಭೇಟಿ ನೀಡಿ, ನವೆಂಬರ್ ತಿಂಗಳಿನಲ್ಲಿ ಭೂಮಿಯ ಮೇಲ್ಪದರು ತೇವಾಂಶ ಕಳೆದುಕೊಂಡು ಬೇಗನೆ ಒಣಗಿರುವುದರ ಪರಿಣಾಮ ಭೂಮಿ ಬಿರುಕು ಬಿಟ್ಟಿರುವುದು ಕಂಡುಬಂದಿರುತ್ತದೆ. ಪ್ರಸಕ್ತ ಸಾಲಿನಲ್ಲಿ ಬಿತ್ತನೆಯಾದ ತೊಗರಿ ಬೆಳೆಯಲ್ಲಿ ತೇವಾಂಶದ ಬಾಧೆಗೆ **"ಮ್ಯಾಕ್ರೋಫೋಮಿನಾ ಫೆಜಿಯೊಲೈ"** ಶೀಲಿಂದ್ರದಿಂದ ಬರುವ ಒಣ ಬೇರು ಕೊಳೆ ರೋಗ ಹೆಚ್ಚಾಗಿ ಕಾಣಿಸಿಕೊಂಡಿರುತ್ತದೆ ಹಾಗೂ ಜೊತೆಗೆ **"ಫೈಟೊಫ್ಥೋರಾ ಮಚ್ಚೆ ರೋಗ"** ವು ಅಲ್ಲಲ್ಲಿ ಕಂಡು ಬಂದಿರುವುದರಿಂದ, ತೊಗರಿ ಒಣಗಲಾರಂಭಿಸಿರುತ್ತದೆ ಎಂದು ತಾಂತ್ರಿಕ ವರದಿ ನೀಡಿರುತ್ತಾರೆ. ತೊಗರಿ ಬೆಳೆಯ ಎಲ್ಲಾ ತಳಿಗಳಲ್ಲಿ ಈ ರೋಗದ ಬಾಧೆ ಕಂಡು ಬಂದಿದ್ದು, ಅದರಲ್ಲೂ ಕಡಿಮೆ ಫಲವತ್ತತೆಯಿಂದ ಕೂಡಿದ, ಗರಸು ಮತ್ತು ಸಾಧಾರಣವಾಗಿರುವ ಹೊಲಗಳಲ್ಲಿ ಮಣ್ಣಿನಲ್ಲಿಯ ತೇವಾಂಶವು ಬೇಗನೆ ಕಡಿಮೆಯಾಗಿ ಈ ರೋಗದ ತೀವ್ರತೆ ಹೆಚ್ಚಾಗಿದೆ. ಆದರೆ, ಆಳವಾದ ಕಪ್ಪು ಭೂಮಿಯಲ್ಲಿ ಬೆಳೆದ ಮತ್ತು ನೀರಾವರಿ ಪದ್ಧತಿಯಲ್ಲಿ ಬೆಳೆದ ತೊಗರಿ ಬೆಳೆಗಳು ಆರೋಗ್ಯಯುಕ್ತವಾಗಿದ್ದವು ಎಂದು ವರದಿ ನೀಡಿರುತ್ತಾರೆ.

ಇಲಾಖೆ ವತಿಯಿಂದ ಸಹಾಯಧನದಲ್ಲಿ ವಿತರಿಸಿದ ಬೀಜಗಳಲ್ಲಿ ಸರ್ಕಾರಿ ಸ್ವಾಮ್ಯದ ಕರ್ನಾಟಕ ರಾಜ್ಯ ಬೀಜ ನಿಗಮ ಹಾಗೂ ರಾಷ್ಟ್ರೀಯ ಬೀಜ ನಿಗಮದಿಂದ 4630.04 ಕ್ವಿಂಟಾಲ್ ಬೀಜ ಹಾಗೂ 2245.62 ಕ್ವಿಂಟಾಲ್ ಬೀಜಗಳನ್ನು ಖಾಸಗಿ ಬೀಜೋತ್ಪದನಾ ಸಂಸ್ಥೆಯಿಂದ ವಿತರಿಸಲಾಗಿದೆ. ಬೀಜ ಅಧಿನಿಯಮದನ್ವಯ ಜಿಲ್ಲೆಯಲ್ಲಿ ಬೀಜ ಪರಿವೀಕ್ಷಕರು ತೊಗರಿ ಬೀಜ ಮಾದರಿಗಳನ್ನು ಬೀಜ ಪರೀಕ್ಷಾ ಪ್ರಯೋಗಾಲಯಕ್ಕೆ ಕಳುಹಿಸಿದ್ದು, ಅದರಲ್ಲಿ ಯಾವುದೇ ಬೀಜ ಕಡಿಮೆ ಗುಣಮಟ್ಟದೆಂದು ವರದಿಯಾಗಿರುವುದಿಲ್ಲ.

ಕಲಬುರಗಿ ಜಿಲ್ಲೆಯಲ್ಲಿ ಬೆಳೆ ಸಮೀಕ್ಷೆ ಪ್ರಕಾರ 6.27 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ತೊಗರಿ ಬಿತ್ತನೆಯಾಗಿರುತ್ತದೆ. ಮುಂಗಾರು ಹಂಗಾಮಿನಲ್ಲಿ ಸಹಾಯಧನದಲ್ಲಿ 6875.66 ಕ್ವಿಂಟಲ್ ತೊಗರಿ ಬೀಜಗಳನ್ನು 32 ರೈತ ಸಂಪರ್ಕ ಕೇಂದ್ರಗಳ ಮೂಲಕ ಪಡೆದು, ರೈತರು 55005.28 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಮಾಡಿರುತ್ತಾರೆ. ಇದು ಒಟ್ಟು ಬಿತ್ತನೆ ಕ್ಷೇತ್ರಕ್ಕೆ ಹೋಲಿಸಿದಾಗ ಶೇ 8.77 ಮಾತ್ರ ಆಗಿದ್ದು, ಉಳಿದ ಶೇ 91.33 ಕ್ಷೇತ್ರಕ್ಕೆ ಬೇಕಾಗುವ ಬೀಜ ರೈತರೇ ಸ್ವತಃ ತಮ್ಮಲ್ಲಿರುವ ಬೀಜಗಳನ್ನು ಅಥವಾ ಇತರೆ ಮೂಲಗಳಿಂದ ಪಡೆದು ಉಪಯೋಗಿಸಿ ಬಿತ್ತನೆ ಕೈಗೊಂಡಿರುತ್ತಾರೆ.

ತಾಲ್ಲೂಕಿನ ತಹಸೀಲ್ದಾರರು ಹಾಗೂ ಸಹಾಯಕ ಕೃಷಿ ನಿರ್ದೇಶಕರುಗಳು ಜಂಟಿ ಸಮೀಕ್ಷೆ ಕೈಗೊಂಡಿದ್ದು, ಸುಮಾರು1.82ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ತೊಗರಿ ಬೆಳೆ ಹಾನಿಯಾಗಿರುವ ಬಗ್ಗೆ ಅಂದಾಜಿಸಲಾಗಿರುತ್ತದೆ.

**ವಿಜಯಪುರ ಜಿಲ್ಲೆ:**

ಮುಂಗಾರು ಹಂಗಾಮಿನಲ್ಲಿ ತೊಗರಿ ಬೆಳೆಯು ಮುಖ್ಯ ಬೆಳೆಯಾಗಿದ್ದು, ಜಿಲ್ಲೆಯಲ್ಲಿ ಇಲ್ಲಿಯವರೆಗೆ ಬೆಳೆ ಸಮೀಕ್ಷೆ ಪ್ರಕಾರ ಅಂದಾಜು 5.35ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಗೊಂಡಿರುತ್ತದೆ. ವಿಜಯಪುರ ಜಿಲ್ಲೆಯಲ್ಲಿ ಸಾಮಾನ್ಯವಾಗಿ 2024ರ ನವೆಂಬರ್ ತಿಂಗಳಿನಲ್ಲಿ ವಾಡಿಕೆಯಂತೆ 21 ಮಿ. ಮೀ ಮಳೆಯಾಗಬೇಕಿದ್ದು, ಆದರೆ, ಕೇವಲ ವಾಸ್ತವವಾಗಿ 4.1 ಮಿ.ಮೀ ಮಳೆಯಾಗಿದ್ದು, ವಾಡಿಕೆಗಿಂತ ಶೇ.80 ರಷ್ಟು ಮಳೆ ಕೊರತೆಯಾಗಿರುತ್ತದೆ.

ಜಿಲ್ಲೆಯಲ್ಲಿ ಮುಂಗಾರು ಹಂಗಾಮಿನ ಜೂನ್ ತಿಂಗಳಿನಲ್ಲಿ ಉತ್ತಮ ಮಳೆಯಾಗಿದ್ದು, ಮಣ್ಣಿನಲ್ಲಿ ಲಭ್ಯವಿರುವ ತೇವಾಂಶದ ಅನುಗುಣವಾಗಿ ಜೂನ್ ತಿಂಗಳಿನಿಂದ ಬಿತ್ತನೆ ಚಟುವಟಿಕೆ ಪ್ರಾರಂಭವಾಗಿರುತ್ತದೆ. ತೊಗರಿ ಬಿತ್ತಿದ ಕ್ಷೇತ್ರಗಳಲ್ಲಿ ಬೀಜಗಳು ಸರಿಯಾಗಿ ಮೊಳಕೆಯೊಡೆದಿರುತ್ತವೆ.

ಸೆಪ್ಟಂಬರ್, ಅಕ್ಟೋಬರ್ ಹಾಗೂ ನವೆಂಬರ್ ತಿಂಗಳಿನಲ್ಲಿ ವಾಡಿಕೆಗಿಂತ ಕಡಿಮೆ ಹಾಗೂ ಅನಿಯಮಿತ ಮಳೆ (Intermittent dry spell & uneven spread) ಆಗಿರುತ್ತದೆ. ಅಕ್ಟೋಬರ್ ತಿಂಗಳಿನ ಎರಡನೇ ವಾರದಿಂದ ನವಂಬರ್ ತಿಂಗಳ ಮೊದಲ ವಾರದವರೆಗೆ ಮಂಜಿನ ಬಾಧೆಗೆ ತೀವ್ರಗತಿಯಲ್ಲಿ ಹೂವುಗಳು ಉದುರಿರುತ್ತವೆ. ಆದ್ದರಿಂದ, ಕಡಿಮೆ ಪ್ರಮಾಣದಲ್ಲಿ ಕಾಯಿಗಳು ಕಟ್ಟಿರುತ್ತವೆ.

ಒಟ್ಟಾರೆಯಾಗಿ ಸೆಪ್ಟಂಬರ್, ಅಕ್ಟೋಬರ್ ಹಾಗೂ ನವೆಂಬರ್ ತಿಂಗಳಿನಲ್ಲಿ ಹವಾಮಾನ ವೈಪರೀತ್ಯದಿಂದ (ಮಳೆ ಕೊರತೆ ಹಾಗೂ ಮಂಜು) ಹೂವುಗಳು ಉದುರಿ ಕಡಿಮೆ ಪ್ರಮಾಣದಲ್ಲಿ ಕಾಯಿಗಳು ಕಟ್ಟಿರುವುದು ಅಲ್ಲಲ್ಲಿ ಕಂಡುಬಂದಿರುತ್ತದೆ.

ಜಿಲ್ಲೆಯಲ್ಲಿ ಪ್ರತಿ ವರ್ಷದಂತೆ ರೈತರಿಗೆ ಮುಂಗಾರು ಹಂಗಾಮಿನಲ್ಲಿ ಇಲಾಖೆಯಿಂದ ಅನುಮೋದಿತ ಸಂಸ್ಥೆಗಳ ಮೂಲಕ ಗುಣಮಟ್ಟದ ತೊಗರಿ ಮತ್ತು ಇತರೆ ಬೆಳೆಗಳ ಬಿತ್ತನೆ ಬೀಜಗಳನ್ನು ರೈತ ಸಂಪರ್ಕ ಕೇಂದ್ರಗಳಲ್ಲಿ ದಾಸ್ತಾನಿಕರೀಸಿ, ಬೀಜ ವಿತರಣೆಯನ್ನು ಕೈಗೊಳ್ಳಲಾಗಿದೆ. ಧಾರವಾಡದ ಬೀಜ ಪರೀಕ್ಷಾ ಪ್ರಯೋಗಾಲಯಕ್ಕೆ ಸದರಿ ಬೀಜ ಮಾದರಿಗಳನ್ನು ಕಳುಹಿಸಿದ್ದು, ವಿಶ್ಲೇಷಣಾ ವರದಿಗಳನ್ವಯ ಯಾವುದೇ ಬೀಜ ಕಡಿಮೆ ಗುಣಮಟ್ಟದೆಂದು ವರದಿಯಾಗಿರುವುದಿಲ್ಲ.

ತೊಗರಿ ಬೆಳೆಯಲ್ಲಿ ಮುಖ್ಯವಾಗಿ ಮೂರು ತಳಿಗಳಾದ ಟಿ.ಎಸ್-3ಆರ್, ಜಿ.ಆರ್.ಜಿ-811 ಮತ್ತು ಜಿ.ಆರ್.ಜಿ-152 ಬಿತ್ತನೆ ಬೀಜಗಳನ್ನು ಇಲಾಖೆಯ ಮುಖಾಂತರ ವಿತರಿಸಲು ಕ್ರಮ ಕೈಗೊಳ್ಳಲಾಗಿದೆ. ಜಿಲ್ಲೆಯಲ್ಲಿ ಇಲಾಖೆಯಿಂದ ಟಿ.ಎಸ್-3 ಆರ್ – 6440.80 ಕ್ವಿಂಟಾಲ್, ಜಿ.ಆರ್.ಜಿ-811 – 2339.68 ಕ್ವಿಂಟಾಲ್ ಹಾಗೂ ಜಿ.ಆರ್.ಜಿ-152 – 2175.70 ಕ್ವಿಂಟಾಲ್ ಒಟ್ಟು 10956.18 ಕ್ವಿಂಟಾಲ್ ತೊಗರಿ ಬಿತ್ತನೆ ಬೀಜ ವಿತರಿಸಲಾಗಿದ್ದು, ಒಟ್ಟು ಬಿತ್ತನೆ ಕ್ಷೇತ್ರಕ್ಕೆ ಹೋಲಿಸಿದಾಗ ಶೇ.16 ರಷ್ಟು ಆಗಿರುತ್ತದೆ. ಜಿಲ್ಲೆಯಲ್ಲಿ ತೊಗರಿ ಬಿತ್ತಿದ ಕ್ಷೇತ್ರಗಳಲ್ಲಿ ಬೀಜಗಳು ಸರಿಯಾಗಿ ಮೊಳಕೆಯೊಡೆದಿರುತ್ತವೆ. ರೈತ ಸಂಪರ್ಕ ಕೇಂದ್ರಗಳಿಂದ ಬಿತ್ತನೆ ಬೀಜಗಳ ವಿತರಣೆ ಮಾಡುವಾಗ ತೊಗರಿ ಬೆಳೆಯ ತಾಂತ್ರಿಕತೆಗಳ ಮಾಹಿತಿ ಇರುವ ಕರಪತ್ರಗಳನ್ನು ಸಹ ರೈತರಿಗೆ ನೀಡಲಾಗಿದೆ.

ಇಲಾಖೆಯ ಮುಖಾಂತರ ವಿತರಿಸಿದ ಬೀಜ ಪ್ರಮಾಣದನ್ವಯ ಈ ಕೆಳಗಿನಂತೆ ವಿವಿಧ ತಳಿಗಳಲ್ಲಿ ಕ್ಷೇತ್ರಾವರಣೆ ಆಗಿರುತ್ತದೆ.

| **ಕ್ರ.ಸಂ** | **ತಾಲ್ಲೂಕಿನ ಹೆಸರು** | **ಟಿ.ಎಸ್-3ಆರ್ (ಹೆ)** | **ಜಿ.ಆರ್.ಜಿ-811 (ಹೆ)** | **ಜಿ.ಆರ್.ಜಿ-152 (ಹೆ)** | **ಒಟ್ಟು (ಹೆ)** |
|---|---|---|---|---|---|
| 1 | ಬಸವನಬಾಗೇವಾಡಿ | 9231.2 | 2358.8 | 4046.08 | 15636.08 |
| 2 | ವಿಜಯಪುರ | 13617.2 | 6449.6 | 2228 | 22294.8 |
| 3 | ಮುದ್ದೇಬಿಹಾಳ | 7160 | 1492 | 3068.8 | 11720.8 |
| 4 | ಇಂಡಿ | 12105.2 | 3710.8 | 4134.4 | 19950.4 |
| 5 | ಸಿಂಧಗಿ | 9412.8 | 4706.24 | 3928.32 | 18047.36 |
| | **ಒಟ್ಟು** | **51526.4** | **18717.44** | **17405.6** | **87649.44** |

ರೈತರು ಹಾಗೂ ರೈತ ಮುಖಂಡರುಗಳಿಂದ ಹೂ ಉದುರುವಿಕೆ ದೂರಿನನ್ವಯ, ಸಂಶೋಧನಾ ನಿರ್ದೇಶಕರು, ಕೃಷಿ ವಿಶ್ವವಿದ್ಯಾಲಯ, ಧಾರವಾಡ ರವರಿಗೆ ವಿಜ್ಞಾನಿಗಳ ತಂಡವನ್ನು ರಚಿಸಿ, ಕ್ಷೇತ್ರ ಭೇಟಿ ವರದಿಯನ್ನು ನೀಡಲು ಕೋರಲಾಗಿತ್ತು, ಅದರಂತೆ, ದಿನಾಂಕ: 19.11.2024 ರಿಂದ ಸಂಶೋಧನಾ ನಿರ್ದೇಶಕರು, ಕೃಷಿ ವಿಶ್ವವಿದ್ಯಾಲಯ, ಧಾರವಾಡ ರವರು ನಿಯೋಜಿರುವ ತಳಿ ಶಾಸ್ತ್ರಜ್ಞರು, ಒಣ ಬೇಸಾಯ ತಜ್ಞರು, ಸಸ್ಯ ಶರೀರ ಶಾಸ್ತ್ರಜ್ಞರು, ಕೀಟ ಮತ್ತು ರೋಗ ತಜ್ಞ ವಿಜ್ಞಾನಿಗಳ ತಂಡ, ಜಂಟಿ ಕೃಷಿ ನಿರ್ದೇಶಕರು ಹಾಗೂ ಇಲಾಖೆಯ ಅಧಿಕಾರಿಗಳೊಂದಿಗೆ ರೈತರ ಕ್ಷೇತ್ರಗಳಿಗೆ ಭೇಟಿ ನೀಡಿ ಜಿಲ್ಲೆಯಲ್ಲಿ ಅಕ್ಟೋಬರ್ ಎರಡನೇ ವಾರದಿಂದ ನವೆಂಬರ್ ಮೊದಲ ವಾರದವರೆಗೆ ತೊಗರಿ ಬೆಳೆಯು ಮಂಜಿನ ಬಾಧೆಗೆ ತುತ್ತಾಗಿದ್ದು, ಇದರಿಂದ ಹೂವುಗಳು ಉದುರಿ ಕಡಿಮೆ ಪ್ರಮಾಣದಲ್ಲಿ ಕಾಯಿಗಳು ಕಟ್ಟಿರುತ್ತದೆ ಎಂದು ವರದಿ ಸಲ್ಲಿಸಿರುತ್ತಾರೆ.

**ಬೆಳಗಾವಿ ಜಿಲ್ಲೆ:**

ಬೆಳಗಾವಿ ಜಿಲ್ಲೆಯಲ್ಲಿ ಮುಂಗಾರು ಹಂಗಾಮಿನಲ್ಲಿ 14,529 ಹೆಕ್ಟೇರ್ ಪ್ರದೇಶದಲ್ಲಿ ತೊಗರಿ ಬಿತ್ತನೆಯಾಗಿದ್ದು, ಈ ಪೈಕಿ ಇಲಾಖೆಯಿಂದ ಒಟ್ಟಾರೆ 982.55ಕ್ವಿಂಟಾಲ್ ವಿವಿಧ ತಳಿಗಳ ತೊಗರಿ ಬಿತ್ತನೆ ಬೀಜಗಳನ್ನು ವಿತರಿಸಲಾಗಿದ್ದು, ಅಂದಾಜು 7860.4 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿರುತ್ತದೆ. ಅಥಣಿ ತಾಲೂಕಿನಲ್ಲಿ ಮುಂಗಾರಿನಲ್ಲಿ ಉತ್ತಮ ಮಳೆಯಾಗಿದ್ದು, ನವೆಂಬರ್ ಮಾಹೆಯಲ್ಲಿ ವಾಡಿಕೆಗಿಂತ ಶೇ.66ರಷ್ಟು ಕಡಿಮೆ ಮಳೆಯಾಗಿರುತ್ತದೆ.

ಕೃಷಿ ವಿಜ್ಞಾನಿಗಳು ಅಥಣಿ ತಾಲೂಕಿನ ತೆಲಸಂಗ, ಬನ್ನೂರು, ಕಕಮರಿ ಮತ್ತು ಕನಾಳ ಗ್ರಾಮಗಳ ಸಮಸ್ಯಾತ್ಮಕ ತಾಕುಗಳಿಗೆ ಭೇಟಿ ನೀಡಿ ವರದಿಯನ್ನು ನೀಡಿರುತ್ತಾರೆ. ಸದರಿ ವರದಿಯ ಅನುಸಾರ ಜೂನ್ ಮೊದಲನೆಯ ವಾರದಿಂದ ಜುಲೈ ತಿಂಗಳ ಮೊದಲನೆ ವಾರದಲ್ಲಿ ಬಿತ್ತನೆ ಕೈಗೊಂಡಿರುತ್ತಾರೆ. ಎಲೆ ಚುಕ್ಕೆ ರೋಗದ ಬಾಧೆಗೆ ಒಳಗಾದ ಕ್ಷೇತ್ರದಲ್ಲಿ ಎಲೆಗಳ ಉದುರುವಿಕೆ ಕಂಡುಬಂದಿದ್ದು, ಇದರಿಂದ ಬೆಳೆಯ ಆಹಾರ ಉತ್ಪಾದನಾ ಸಾಮರ್ಥ್ಯ ಕಡಿಮೆಯಾಗಿ, ಇಳುವರಿಯ ಮೇಲೆ ಪರಿಣಾಮ ಬೀರಿರುತ್ತದೆ ಎಂದು ಅಭಿಪ್ರಾಯ ಪಟ್ಟಿರುತ್ತಾರೆ. ಅಲ್ಲದೇ, ಸಾಲಿನಿಂದ ಸಾಲಿಗೆ ಅಂತರ ಸೂಕ್ತವಾಗಿದ್ದು, ಗಿಡದಿಂದ ಗಿಡಕ್ಕೆ ದಟ್ಟವಾಗಿ ಇರುವ ಕಾರಣ, ಗಿಡಗಳು ಹೆಚ್ಚು ಕವಲು ಒಡೆಯದೇ ಎತ್ತರಕ್ಕೆ ಬೆಳೆಯುತ್ತವೆ. ಆದ್ದರಿಂದ, ಇಳುವರಿ ಕುಂಠಿತವಾಗಿರುತ್ತದೆ ಎಂದು ಅಭಿಪ್ರಾಯದೊಂದಿಗೆ ವರದಿ ಸಲ್ಲಿಸಿರುತ್ತಾರೆ.

**ಬೀದರ್ ಜಿಲ್ಲೆ:** ಬೀದರ್ ಜಿಲ್ಲೆಯ ಬಸವಕಲ್ಯಾಣ ಮತ್ತು ಹುಮ್ನಾಬಾದ್ ತಾಲ್ಲೂಕುಗಲ್ಲಿ ತೊಗರಿ ಬೆಳೆಯು ಒಣಹವೆಯಿಂದ ಮತು ಮಣ್ಣಿನಲ್ಲಿ ಕಡಿಮೆ ತೇವಾಂಶ ಇರುವುದರಿಂದ ಸುಮಾರು 2236 ಹೆಕ್ಟೇರ್ ಪ್ರದೇಶದಲ್ಲಿ ತೊಗರಿ ಬೆಳೆಯು ಒಣಗುತ್ತಿರುವ ಬಗ್ಗೆ ವರದಿಯಾಗಿರುತ್ತದೆ.

**ಯಾದಗಿರಿ ಜಿಲ್ಲೆ:** ಯಾದಗಿರಿ ಜಿಲ್ಲೆಯ ಹುಣಸಗಿ ಮತ್ತು ಸುರಪುರ ತಾಲ್ಲೂಕುಗಳಲ್ಲಿ ಅಂದಾಜು 194.20 ಹೆಕ್ಟೇರ್ ಪ್ರದೇಶದಲ್ಲಿ ತೊಗರಿ ಬೆಳೆಯಲ್ಲಿ ಕಾಯಿ ಬಿಡದೇ ಬೆಳೆ ಹಾನಿಯಾಗಿರುವ ಬಗ್ಗೆ ವರದಿಯಾಗಿರುತ್ತದೆ. ಕೃಷಿ ವಿಶ್ವವಿದ್ಯಾಲಯದ ವಿಜ್ಞಾನಿಗಳು ಈ ಬಗ್ಗೆ ಪರಿಶೀಲನೆ ಕೈಗೊಂಡಿರುತ್ತಾರೆ.

ರಾಜ್ಯಾದ್ಯಂತ 2024-25 ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ 4.09 ಲಕ್ಷ ರೈತರು ತೊಗರಿ ಬೆಳೆಗೆ ವಿಮೆ ಮಾಡಿಸಿದ್ದು, ಇದರ ಪೈಕಿ, ಕಲಬುರಗಿ ಜಿಲ್ಲೆಯಲ್ಲಿ 1.70 ಲಕ್ಷ ರೈತರು, ವಿಜಯಪುರ ಜಿಲ್ಲೆಯಲ್ಲಿ 1.08 ಲಕ್ಷ ರೈತರು, ಬೆಳಗಾವಿ ಜಿಲ್ಲೆಯಲ್ಲಿ 1213 ರೈತರು ಬೀದರ್ ಜಿಲ್ಲೆಯಲ್ಲಿ 82384 ರೈತರು ಮತ್ತು ಯಾದಗಿರಿ ಜಿಲ್ಲೆಯಲ್ಲಿ 6390 ರೈತರು, ಪ್ರಧಾನ ಮಂತ್ರಿ

ಫಸಲ್ ಬಿಮಾ ಯೋಜನೆಯಡಿ ನೋಂದಣಿ ಮಾಡಿರುತ್ತಾರೆ. ಸ್ಥಳೀಯ ವಿಕೋಪದಡಿ ರಾಜ್ಯಾದ್ಯಂತ ತೊಗರಿ ಬೆಳೆದ 1.86ಲಕ್ಷ ರೈತರಿಗೆ 91.93ಕೋಟಿ ಮೊತ್ತದ ವಿಮಾ ಪರಿಹಾರ ಲೆಕ್ಕಾಚಾರ ಮಾಡಿ ಇತ್ಯರ್ಥಪಡಿಸಲಾಗುತ್ತಿದೆ. ಈ ಪೈಕಿ, ಕಲಬುರಗಿ ಜಿಲ್ಲೆಯ 1.69ಲಕ್ಷ ರೈತರಿಗೆ ರೂ.70.47 ಕೋಟಿ ವಿಮಾ ಪರಿಹಾರವನ್ನು ಇತ್ಯರ್ಥಪಡಿಸಲಾಗಿದೆ. ಇದಲ್ಲದೇ, ರಾಜ್ಯದಲ್ಲಿ ಕೊಯ್ಲೋತ್ತರ ಬೆಳೆ ನಷ್ಟಕ್ಕಾಗಿ 2.74 ಕೋಟಿ ವಿಮೆ ಪರಿಹಾರ ಇತ್ಯರ್ಥಪಡಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ. ಈ ಪೈಕಿ, ಕಲಬುರಗಿ ಜಿಲ್ಲೆಯ 2.54 ಕೋಟಿ ಒಳಗೊಂಡಿರುತ್ತದೆ.

ಸದರಿ ಯೋಜನೆಯು ಇಳುವರಿ ಆಧಾರಿತವಾಗಿದ್ದು, ಬೆಳೆ ಕಟಾವು ಆದ ನಂತರ ಇಳುವರಿ ಆಧಾರದ ಮೇಲೆ ಪ್ರಧಾನ ಮಂತ್ರಿ ಫಸಲ್ ಭಿಮಾ ಯೋಜನೆಯ ಮಾರ್ಗಸೂಚಿಯನ್ವಯ ಬೆಳೆ ವಿಮೆ ಇತ್ಯರ್ಥಪಡಿಸಲಾಗುವುದು. ತೊಗರಿ ಬೆಳೆಯ ಬೆಳೆ ಕಟಾವು ಪ್ರಯೋಗಗಳು ಪೂರ್ಣವಾದ ತರುವಾಯ, ಇಳುವರಿಯಲ್ಲಿ ಕುಂಠಿತವಾಗುವ ಪ್ರಮಾಣವನ್ನು ಅಂದಾಜಿಸಬಹುದಾಗಿದೆ.

2024-25ನೇ ಸಾಲಿನಲ್ಲಿ **ಪ್ರತಿ ಕ್ವಿಂಟಾಲ್ ತೊಗರಿಗೆ ರೂ.7,550/- ರಂತೆ** ಕೇಂದ್ರ ಸರ್ಕಾರವು ಬೆಂಬಲ ಬೆಲೆಯನ್ನು ಘೋಷಿಸಿರುತ್ತದೆ. ರಾಜ್ಯದ ಪ್ರಮುಖ ಮಾರುಕಟ್ಟೆಗಳಲ್ಲಿ ಬೆಂಬಲ ಬೆಲೆಗಿಂತ ಕಡಿಮೆ ಧಾರಣೆಯಲ್ಲಿ ಮಾರಾಟವಾದ ಹಿನ್ನೆಲೆಯಲ್ಲಿ ಜಿಲ್ಲಾ ಟಾಸ್ಕ್ ಫೋರ್ಸ್‌ನ ಶಿಫಾರಸ್ಸಿನ ಅನ್ವಯ, ರಾಜ್ಯ ಸರ್ಕಾರದ ವತಿಯಿಂದ ಕೇಂದ್ರ ಸರ್ಕಾರದ ಅನುಮೋದನೆ ಪಡೆದು **ಗರಿಷ್ಠ 3,06,150 ಮೆಟ್ರಿಕ್ ಟನ್** ಎಫ್.ಎ.ಕ್ಯೂ ಗುಣಮಟ್ಟದ ತೊಗರಿಯನ್ನು ಕಲಬುರಗಿ, ಯಾದಗಿರಿ, ಬೀದರ್, ರಾಯಚೂರು, ವಿಜಯಪುರ, ಕೊಪ್ಪಳ, ಬೆಳಗಾವಿ, ಬಳ್ಳಾರಿ, ವಿಜಯನಗರ, ಬಾಗಲಕೋಟೆ, ಚಿಕ್ಕಬಳ್ಳಾಪುರ, ಚಿತ್ರದುರ್ಗ ಹಾಗೂ ಕೋಲಾರ ಜಿಲ್ಲೆಗಳ ರೈತರಿಂದ ಬೆಂಬಲ ಬೆಲೆ **ರೂ.7,550/-ರ** ಜೊತೆಗೆ ರಾಜ್ಯ ಸರ್ಕಾರದ ವತಿಯಿಂದ ತೊಗರಿ ಬೆಳೆಯುವ ರೈತರ ಹಿತ ಕಾಪಾಡುವ ಉದ್ದೇಶದಿಂದ ಪ್ರತಿ ಕ್ವಿಂಟಾಲ್ ತೊಗರಿಗೆ **ರೂ.450/- ಗಳ ಪ್ರೋತ್ಸಾಹಧನವನ್ನು** ಘೋಷಿಸಿ, ಒಟ್ಟಾರೆಯಾಗಿ ಪ್ರತಿ ಕ್ವಿಂಟಾಲ್‌ಗೆ **ರೂ.8,000/-** ರಂತೆ ಪ್ರತಿ ರೈತರಿಂದ ಗರಿಷ್ಟ 40 ಕ್ವಿಂಟಾಲ್ ಖರೀದಿ ಪ್ರಮಾಣವನ್ನು ನಿಗದಿಪಡಿಸಿ, ಗ್ರಾಮೀಣ ಭಾಗದ ರೈತರಿಗೆ ಅನುಕೂಲವಾಗುವಂತೆ PACS/TAPCMS/ FPO ಗಳ ಮೂಲಕ ಒಟ್ಟು **516 ಖರೀದಿ ಕೇಂದ್ರಗಳನ್ನು** ತೆರೆದು ದಿ:05.03.2025 ರ ಅಂತ್ಯಕ್ಕೆ **79,409** ನೋಂದಾಯಿತ ರೈತರ ಪೈಕಿ, **19,323** ರೈತರಿಂದ **25,401 ಮೆಟ್ರಿಕ್ ಟನ್** ಪ್ರಮಾಣದ ತೊಗರಿಯನ್ನು ಖರೀದಿಸಲಾಗಿರುತ್ತದೆ. ಖರೀದಿ ಪ್ರಕ್ರಿಯೆಯು **ದಿ:02.04.2025** ರವರೆಗೂ ಚಾಲ್ತಿಯಲ್ಲಿರುತ್ತದೆ.

**(ಎನ್. ಚಲುವರಾಯಸ್ವಾಮಿ)**
ಕೃಷಿ ಸಚಿವರು

ಸಂಖ್ಯೆ: AGRI/73/ACT/2025